

ಹಿಂದೆಲ್ಲಾ ಬೆಳ್ಳಿ ಆಭರಣ ಎಂದರೆ ಅದು ಕಾಲ್ಗೆಜ್ಜೆ, ಕಡ, ಕಾಲುಂಗುರ.. ಇಷ್ಟೇ ಸೀಮಿತ ವ್ಯಾಪ್ತಿ ಹೊಂದಿತ್ತು. ಆದರೆ ಈಗ ಬೆಳ್ಳಿಯಲ್ಲೂ ತರಾವರಿ ಆಭರಣ ಬಂದಿದ್ದು, ಧರಿಸಲು ಆರಾಮದಾಯಕ, ಹಗುರ ಹಾಗೂ ಫ್ಯಾಷನಬಲ್ ಕೂಡ ಎನಿಸಿದೆ.

ಬೆಳ್ಳಿ ಹೊಳಪುಳ್ಳ ಒಂದು ಆಭರಣವಾಗಿ, ಕುಡಿಯಲು ಲೋಟ, ಗಿಣ್ಣಾಲು ಮಕ್ಕಳಿಗೆ ಆಹಾರ ಕೊಡಲು, ದೈವಾಭರಣ, ದೇವ ಕಾರ್ಯಗಳಿಗೆ ಪಾತ್ರೆಗಳಾಗಿ, ದೇವರ ಮೂರ್ತಿ, ಮಂಟಪ... ಹೀಗೆ ಹತ್ತು ಹಲವು ರೀತಿಯಲ್ಲಿ ಪ್ರಾಮುಖ್ಯ ಪಡೆದಿದೆ. ಚಿನ್ನಕ್ಕಿಂತ ಬೆಲೆ ಕಡಿಮೆಯಾದರೂ ಬೆಳ್ಳಿಗೆ ಅದರದ್ದೆ ಆದ ಸ್ಥಾನವಿದೆ. ಬೆಳ್ಳಿ ಆಭರಣ ಧರಿಸಿದರೆ ಆರೋಗ್ಯಕ್ಕೂ ಪೂರಕ ಎನ್ನುತ್ತದೆ ವೈಜ್ಞಾನಿಕ ಸಂಶೋಧನೆಯೊಂದು.

ಬೆಳ್ಳಿಯ ಗೆಜ್ಜೆ, ಬಳೆ, ಕಿವಿಯೋಲೆ, ಉಂಗುರ, ಜೊತೆಗೆ ಕೇರಳ ಹಾರವನ್ನೂ ಇಂದು ಮಹಿಳೆಯರು ಧರಿಸುತ್ತಾರೆ. ಆದರೆ ಅದೇ ಹಳೇ ವಿನ್ಯಾಸದಲ್ಲಿ ಅದು ಮನಸ್ಸಿಗೆ ಸಂತಸ, ಹೊಸತನದ ಅನುಭವ ನೀಡುವುದು ಕಡಿಮೆ. ಹಾಗಾಗಿ ಇಂದು ವಿನೂತನವಾಗಿ ಕೇರಳ ಫ್ಯಾಷನ್ ಬೆಳ್ಳಿ ಆಭರಣದಲ್ಲಿ ಒಡಮೂಡಿದೆ. ಇದರ ವಿನ್ಯಾಸ ಅದ್ಭುತವಾಗಿದ್ದು, ಯುವತಿಯರನ್ನು ಥಟ್ಟನೆ ಸೆಳೆಯುವಂತಿದೆ.

## ರೋಸ್ ಪೆಂಡೆಂಟ್ ಸರ

ಗುಲಾಬಿಯನ್ನು ಇಷ್ಟಪಡದವರು ಯಾರಿದ್ದಾರೆ? ಪ್ರೇಮದ ಸಂಕೇತವಾಗಿ, ಸಭೆ ಸಮಾರಂಭಗಳಲ್ಲಿ ಸ್ವಾಗತಿಸಲು, ಅಲಂಕಾರಕ್ಕೆ ಗುಲಾಬಿ ಹೂವೇ ಶ್ರೇಷ್ಠ. ಹಿಂದೆ ಬಟ್ಟೆಯನ್ನು ತುಂಡರಿಸಿ ಚೊಕ್ಕವಾಗಿ ಒಂದು ಕಡ್ಡಿಯ ತುದಿಯಲ್ಲಿ ನೂಲಿನ ಸಹಾಯದಿಂದ ಗುಲಾಬಿ ಹೂ ತಯಾರಿಸಿ ಶೃಂಗಾರಕ್ಕೆ ಹೂದಾನಿಯಲ್ಲಿ ಇಡುತ್ತಿದ್ದರು.

ಈಗ ಬೆಳ್ಳಿಯಲ್ಲಿ ಗುಲಾಬಿ ಹೂವು ತಯಾರಿಸಬಹುದು. ಬೆಳ್ಳಿಯ ತೆಳ್ಳಗಿನ ತಗಡನ್ನು ಬೇಕಾದ ರೀತಿಯಲ್ಲಿ ಕತ್ತರಿಸಿ ಗುಲಾಬಿ ದಳಗಳನ್ನು ತಯಾರಿಸಿ ಹೂವಿನ ಆಕಾರ ಕೊಡಬಹುದು. ಇದಕ್ಕೆ ಫ್ಯಾನ್ಸಿ ಬೀಡ್ಸ್‌ಗಳನ್ನು ನೂಲಿನಲ್ಲಿ ಪೋಣಿಸಿ ಮಧ್ಯಭಾಗದಲ್ಲಿ ಈ ಬೆಳ್ಳಿಯ ಗುಲಾಬಿಯನ್ನು ಪದಕದಂತೆ ಪೋಣಿಸಿದರೆ ರೋಸ್ ಪೆಂಡೆಂಟ್ ಸರ ರೆಡಿ. ಇನ್ನೂ ಸೌಂದರ್ಯ ಹೆಚ್ಚಲು ಉಬ್ಬಿದ ಬೆಳ್ಳಿಯ ಗುಂಡುಗಳನ್ನು ಸೇರಿಸಿದರೆ ಅದರ ಅಂದ ಹೆಚ್ಚುತ್ತದೆ. ಬೆಳ್ಳಿಯ ಗುಂಡುಗಳು ಗಟ್ಟಿಯಾಗಿರಲು ಒಳಗೆ ವ್ಯಾಕ್ಸ್ ತುಂಬಿದಲ್ಲಿ ಭದ್ರವಾಗಿರುತ್ತದೆ. ಬೆಳ್ಳಿಯಲ್ಲಿ ಆಕ್ಸಿಡೈಸ್ಡ್ ಫಿನಿಶ್ ಆಭರಣಕ್ಕೆ ಹೊಸ ಮೆರುಗು ನೀಡುತ್ತದೆ, ಅದ್ಭುತ ನೋಟ ನೀಡುತ್ತದೆ, ನಮ್ಮ ವ್ಯಕ್ತಿತ್ವ ಎದ್ದು ಕಾಣುತ್ತದೆ.

ಮದುವೆ, ಮುಂಜಿ ಮುಂತಾದ ಸಮಾರಂಭಗಳಿಗೂ ಇದನ್ನು ಧರಿಸಬಹುದು. ರೇಷ್ಮೆ ಸೀರೆ, ಫ್ಯಾನ್ಸಿ ಸೀರೆ ಮೇಲೆ ಬೆಳ್ಳಿ ಆಭರಣ ಸೊಗಸಾಗಿರುತ್ತದೆ.

## ಕ್ರಿಸ್ಟಲ್ ಬೀಡ್ಸ್ ಜೊತೆ ಬೆಳ್ಳಿ ಗುಂಡು

ಬೆಳ್ಳಿಯ ಆಕ್ಸಿಡೈಸ್ಡ್ ಫಿನಿಶ್ ಇರುವ ಗುಂಡುಗಳು, ಫ್ಯಾನ್ಸಿ ಬೀಡ್ಸ್ ಮಾತ್ರ ಹೊಂದಿರುವ ಆಭರಣ ವಿಶಿಷ್ಟ ಲುಕ್ ಕೊಡುತ್ತದೆ. ಬೆಲೆಯೂ ಕಡಿಮೆ. ಮೀಟಿಂಗ್, ಉಪನ್ಯಾಸ ಮುಂತಾದ ಕಾರ್ಯಕ್ರಮಗಳಿಗೆ ಸಿಂಪಲ್ ಇರುವ ಬೆಳ್ಳಿ ಹಾರ ಧರಿಸಿದರೆ ಚೆನ್ನಾಗಿರುತ್ತದೆ. ಜೊತೆಗೆ ಜಾಲರಿಗಳು, 3 ಎಳೆ ಸರದಲ್ಲೂ ಸಣ್ಣ ಸಣ್ಣ ಹೂಗಳಿದ್ದಾಗ ನೋಡಲು ಸೊಗಸಾಗಿರುತ್ತದೆ. ಇತರ ಮಹಿಳೆಯ ಕಣ್ಣು ಬೆಳ್ಳಿ ಆಭರಣದ ಮೇಲೆ ಬಿದ್ದು, ತಮಗೂ ಇಂಥದ್ದೇ ಬೇಕು ಅನಿಸುವಂತಿರುತ್ತದೆ.



ಫ್ಯಾನ್ಸಿ ಬೀಡ್ ಬೇಡ ಎಂದರೆ ಕೇವಲ ಬೆಳ್ಳಿಯ ಗುಂಡುಗಳು, ಬೆಳ್ಳಿ ಎಲೆಯ ವಿನ್ಯಾಸ ಸರದಲ್ಲಿದ್ದಾಗ ಅಬ್ಬರದ ಆಭರಣವಾಗಿ ಸಮಾರಂಭಗಳಿಗೆ ಚೆನ್ನಾಗಿ ಒಪ್ಪುತ್ತದೆ. ಕಿವಿಗೊಂದು ದೊಡ್ಡ ಬೆಂಡೋಲೆ, ಜುಮುಕಿ, ಆಕ್ಸಿಡೈಸ್ಡ್ ಫಿನಿಶ್ ಆದರೆ ಒಳ್ಳೆದು. ಗುಲಾಬಿ ಪೆಂಡೆಂಟ್ ತರದ್ದೇ ಗುಲಾಬಿ ಓಲೆ, ಗುಲಾಬಿ ಉಂಗುರ ಧರಿಸಬಹುದು. ಇದು ಚೂಡಿದಾರ ಲೆಹಂಗಾ ಇಂತಹ ಉಡುಪುಗಳಿಗೆ ಸರಿಯಾಗಿ ಹೊಂದುತ್ತವೆ.

ಬೆಳ್ಳಿಯ ಬಣ್ಣ ಹೊಳಪು ಇರುವುದು ಒಂದು ವಿನ್ಯಾಸ ಆದರೆ ಆಕ್ಸಿಡೈಸ್ಡ್ ಫಿನಿಶ್ ಇನ್ನೊಂದು ಬಗೆ. ಇದೇ ರೀತಿ ಮ್ಯಾಟ್ ಫಿನಿಶ್ (ಹೊಳಪಿಲ್ಲದೆ) ಆಭರಣಗಳು ಇವೆ. ಇವೆಲ್ಲವೂ ವೈವಿಧ್ಯಮಯವಾಗಿರುತ್ತದೆ.

ಪೆಂಡೆಂಟ್ ಅಗಲವಾಗಿದ್ದಾಗ ಸರವೂ ಸ್ವಲ್ಪ ಅಗಲದ್ದೇ ಇರಬೇಕು. ವ್ಯಾಕ್ಸ್ ಹೊಂದಿದ್ದು ಅಗಲದ, ಚಪ್ಪಟೆಯ ಬಿಲ್ಲೆಗಳಂತಿರುವ ಹಾರ್ಟ್, ಓವಲ್, ಡೈಮಂಡ್ ವಿನ್ಯಾಸದೊಂದಿಗೆ ಬೆಳ್ಳಿಯ ಗುಂಡುಗಳನ್ನು ಪೋಣಿಸಿ ಮಾಡಿದ ಹಾರ ಸೊಗಸಾಗಿರುತ್ತದೆ.

## ಮೂರು ಎಸಳಿನ ಹೂವು ಜೊತೆಗೆ ಜಾಲರಿ

ಈ ಆಭರಣ ಹಗುರವಾಗಿದ್ದು (ಎಸಳು ಕಮ್ಮಿ ಇರುವುದರಿಂದ) ಹೂವಿನ ಮಧ್ಯದಿಂದ ಕುಸುಮ ಇಳಿ ಬಿಟ್ಟಂತೆ ಇರುವ ವಿನ್ಯಾಸ ಧರಿಸಲು ಆರಾಮವಾಗಿದ್ದು ಚಂದವೂ ಇರುತ್ತದೆ. ಸರ ಸ್ವಲ್ಪ ಸಪೂರವಾಗಿರಲಿ, ನೈಜವಾಗಿ ಕಾಣಲು ಪ್ರಕೃತಿ ಸಹಜವಾಗಿ ಉದ್ಭವವಾಗುವ ಎಲೆ, ಬಳ್ಳಿ, ಹೂವು ಇಂತಹ ವಿನ್ಯಾಸದ ಬೆಳ್ಳಿಯ ಆಭರಣಕ್ಕೆ ಅದರದ್ದೇ ಆದ ಸ್ಥಾನವಿದೆ. ಕೊರಳಲ್ಲಿಯೂ ಅದ್ಭುತವಾಗಿ ಕಾಣುತ್ತದೆ. ವಿನ್ಯಾಸ ಯಾವತ್ತೂ ಔಟ್‌ಡೇಟೆಡ್ ಆಗುವುದಿಲ್ಲ. ಭಾವನೆಗಳ ಜೊತೆಗೆ ಬೆರೆತು ಹೋಗುವ ಆಭರಣಗಳು ಇವು.

ಅಲಂಕಾರಕ್ಕೂ ಸರಿ, ಜೋಪಾನವಾಗಿ ಇಡುವುದಕ್ಕೂ ಸುಲಭ, ಕುಸುರಿ ಕೆಲಸ ಕಡಿಮೆ ಇದ್ದು ವಿನ್ಯಾಸ ಸೊಗಸಾಗಿರುವುದರಿಂದ ಧರಿಸಲು ಖುಷಿ. ಬೆಲೆ ಕಡಿಮೆ ಇರುವುದರಿಂದ ಪ್ರಯಾಣ ಕಾಲದಲ್ಲಿ ಒಯ್ಯಲು ಸುಲಭ, ಜನಸಾಮಾನ್ಯರಿಗೂ ಕೈಗೆಟಕುವ ಆಭರಣ ಇದು. ಫ್ಯಾಷನಬಲ್ ಆಗಿಯೂ ಇರುವುದರಿಂದ ಆಧುನಿಕ ಮನೋಭಾವದ ಮಹಿಳೆಯರಿಗೆ ಸೂಕ್ತವಾದ ಒಡವೆ ಇದು.